**ಪಾಠ–10** **ಆಗಸ್ಟ್ 31–ಸೆಪ್ಟೆಂಬರ್ 6**

# ಸುವಾರ್ತೆಯನ್ನು ಜೀವಿಸುವುದು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಅಧ್ಯಯನಕ್ಕಾಗಿ ಓದಿರಿ : ರೋಮ 8:20–23, ಯೋಹಾನ 3:16,17, ಮತ್ತಾಯ 9:36, ಎಫೆಸ 2:8–10, ಮತ್ತು 1 ಯೋಹಾನ 3:16,17, ಪ್ರಕಟಣೆ 14:6,7.

**ಸ್ಮರಣವಾಕ್ಯ : ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದುದಲ್ಲ, ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದ ಉಂಟಾದುದಲ್ಲ; ಆದುದರಿಂದ ಹೊಗಳಿ ಕೊಳ್ಳುವುದಕ್ಕೆ ಯಾರಿಗೂ ಆಸ್ಪದವಿಲ್ಲ, ನಾವು ಆತನ ನಿರ್ಮಾಣ : ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡೆಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು – ಎಫೆಸ 2:8–10.**

ನಾವು ದೇವರ ಆಜ್ಞೆಗಳ ಅಗತ್ಯತೆಗಳ ಅಥವಾ ಆತನ ಬೋಧನೆಗಳ ಕುರಿತು ಮಾತನಾಡುವಾಗ ಯಾವುದನ್ನು ಸಂಪಾದಿಸಬಲ್ಲೆವೋ, ರಕ್ಷಣೆಗೆ ಕೊಡುಗೆ ನೀಡಬಲ್ಲೆವೋ ಅಥವಾ ದೇವರ ಅನುಗ್ರಹ ಪಡೆದುಕೊಳ್ಳುತ್ತೇವೆಯೋ ಅವು ಹೇಗೋ ನಮಗೆ ರಕ್ಷಣೆ ಕೊಡುತ್ತವೆ ಎಂಬ ಅಪಾಯದಲ್ಲಿಯೂ ಶೋಧನೆಯಲ್ಲಿಯೂ ಸಿಕ್ಕಿಹಾಕಿಕೊಳ್ಳುತ್ತೇವೆ. ಆದರೆ ಸತ್ಯವೇದವು ಯೇಸುಕ್ರಿಸ್ತನ ಬದಲೀ ಮರಣದಿಂದ ದೇವರ ಕೃಪೆಯಿಂದಲೇ ಪಾಪಿಗಳಿಗೆ ರಕ್ಷಣೆಯಾಗುತ್ತದೆಂದು ಪುನರಾವರ್ತನೆಯಾಗಿ ಹೇಳುತ್ತದೆ. ಇದಕ್ಕೆ ನಾವು ಏನನ್ನು ತಾನೆ ಸೇರಿಸಬಲ್ಲೆವು (ಕೊಡಬಲ್ಲೆವು)? ಅಥವಾ ಎಲೆನ್ ಜಿ ವೈಟಮ್ಮನವರು ಬರೆಯುವಂತೆ : "ನೀವು ಮನುಷ್ಯನಲ್ಲಿರುವ ಪ್ರತಿಯೊಂದು

ಶ್ರೇಷ್ಠವಾದುದನ್ನು, ಅಂದವಾದದ್ದನ್ನು, ಒಳ್ಳೆಯದನ್ನು ಮತ್ತು ಶುದ್ಧವಾದುದನ್ನು ಒಟ್ಟಾಗಿ ಸೇರಿಸಿ ನಮ್ಮ ರಕ್ಷಣಾರ್ಥವಾಗಿ ದೇವರಿಗೆ ಸಲ್ಲಿಸಿದರೆ ಅದು ಕೇವಲ ಒಂದು ಪಿತೂರಿಯಾಗಿ ತಿರಸ್ಕೃತವಾಗುತ್ತದೆ : ಫೇತ್ ಅಂಡ್ ವರ್ಕ್ಸ್, ಪುಟ 24.

ನಾವು ಕೊರತೆಯಲ್ಲಿರುವ ಸೋದರರಿಗೆ ಮಾಡುವ ಕರುಣೆ ಮತ್ತು ಅನುಕಂಪದ ಕೆಲಸಗಳನ್ನು (ಕರ್ಮಮಾರ್ಗ) ನಮ್ಮ ರಕ್ಷಣೆಗೆ ಕಾನೂನಾತ್ಮಕ ಹಕ್ಕೆಂದು ಪರಿಗಣಿಸಲಾಗದು. ನಾವು ನಮ್ಮ ತಿಳುವಳಿಕೆಯಲ್ಲಿ ಬೆಳೆದಂತೆ ರಕ್ಷಣೆಯನ್ನು ಮೆಚ್ಚುವವರಾಗಿ ದೇವರ ಪ್ರೀತಿಯನ್ನು ಗಳಿಸುತ್ತೇವೆ. ತರುವಾಯ ಬಡವರ ಮತ್ತು ಶೋಷಿತರ ಪರಾಂಬರಿಕೆಯು ನಮ್ಮ ಮೇಲೆ ಬೀಳುತ್ತದೆ. ನಾವು ಇತರರಿಗೆ ಕೊಡುವುದಕ್ಕಾಗಿ ದೇವರಿಂದ ಪಡೆದುಕೊಂಡಿರುತ್ತೇವೆ. ದೇವರು ನಮ್ಮನ್ನು ಪ್ರೀತಿಸುವುದನ್ನು ಕಾಣುವಾಗ ಇತರರನ್ನು ಪ್ರೀತಿಸುತ್ತಾನೆ ಮತ್ತು ನಾವು ಕೂಡ ಇತರರನ್ನು ಪ್ರೀತಿಸಬೇಕೆಂದು ನಮ್ಮನ್ನು ಕರೆಯುತ್ತಾನೆ.

ಈ ವಾರದ ಅಧ್ಯಯನವನ್ನು ಸೆಪ್ಟೆಂಬರ್ 7ನೇ ತಾರೀಖಿನ ಸಬ್ಬತ್ತಿಗಾಗಿ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಸೆಪ್ಟೆಂಬರ್ 1**

**‘ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು’** (ಯೋಹಾನ 3:16)

‘ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು’ ಎಂಬುದು ಮೂಲಗ್ರೀಕ್ ಪದ ಕಾಸ್‌ಮೋಸ್ ಆಗಿದೆ. ಲೋಕವು ಸೃಷ್ಟಿಮಾಡಲ್ಪಟ್ಟಿದೆ ಮತ್ತು ವ್ಯವಸ್ಥಿತಾ ಘಟಕ ಎಂಬುದು ಕಾಸ್‌ಮೋಸ್ ಪದದ ಅರ್ಥ. ‘ದಿ ಎಸ್.ಡಿ.ಎ. ಬೈಬಲ್ ಕಾಮೆಂಟರಿ, ಸಂಪುಟ 5, ಪುಟ 929.

ಈ ಪದವು ಮಾನವತೆಯ ರಕ್ಷಣೆಯನ್ನು ಕುರಿತು ಹೇಳುತ್ತದೆ. ಆದರೆ ರಕ್ಷಣೆಯ ಯೋಜನೆಯು ಇಡೀ ಸೃಷ್ಟಿಗೆ ಅನ್ವಯವಾಗುತ್ತದೆ.

ರೋಮ 8:20–23ರನ್ನು ಓದಿರಿ. ರಕ್ಷಣೆಯ ಯೋಜನೆಯಲ್ಲಿ ವಿಶಾಲವಾದ ವಿವಾದದ ಬಗ್ಗೆ ಏನನ್ನು ಬೋಧಿಸುತ್ತದೆ?

ಹೌದು, ಒಂದು ಮಟ್ಟದಲ್ಲಿ ರಕ್ಷಣೆ ಎಂಬುದು ಪ್ರತಿಯೊಬ್ಬರೂ ದೇವರೊಂದಿಗೆ ವೈಯಕ್ತಿಕ ಸಂಬಂಧ ಹೊಂದಿಕೊಂಡಿರುವುದು. ಆದರೆ ರಕ್ಷಣೆ ಎಂಬುದು ಅದಕ್ಕಿಂತಲೂ ಹೆಚ್ಚಿನದು. ನೀತಿ ನಿರ್ಣಯವೆಂದರೆ ನಮ್ಮ ಪಾಪಗಳು ಕ್ಷಮಿಸಲ್ಪಡುವುದು ಮಾತ್ರವೇ ಆಗಿರದೆ, ಯೇಸುಕ್ರಿಸ್ತನ ಮತ್ತು ಪರಿಶುದ್ಧಾತ್ಮನ ಶಕ್ತಿಯಾಗಿ, ಕರ್ತನನ್ನು ಸೇರಿ ದೇವಕುಟುಂಬವಾಗಿ ಕ್ಷಮಾಪಣೆಯನ್ನು ಹೊಂದುವಂಥದ್ದಾಗಿದೆ. ಲೋಕಕ್ಕೆ ತಮ್ಮ ಒಳ್ಳೆಯ ಕೆಲಸಗಳಿಂದ (ಸತ್ಕ್ರಿಯಗಳಿಂದ) ಸಾಕ್ಷಿಯಾಗಿರಬೇಕು.

ಯೋಹಾನ 3:16,17 ನ್ನು ಓದಿರಿ. 17ನೇ ವಾಕ್ಯವು 16ನೇ ವಾಕ್ಯದ ಅರ್ಥಕ್ಕೆ ವಿಶಾಲವಾದ ಅರಿವನ್ನು ಹೇಗೆ ನೀಡುವಂಥದ್ದಾಗಿದೆ?

ದೇವರು ನಮ್ಮನ್ನು ಮಾತ್ರವಲ್ಲದೆ ಇತರರನ್ನು ಪ್ರೀತಿಸುತ್ತಾನೆಂದು ಒಪ್ಪಬಹುದು. ನಾವು ಪ್ರೀತಿ ಮಾಡುವವರನ್ನು ಸಹ ದೇವರು ಪ್ರೀತಿಸುವವನಾಗಿರುವುದರಿಂದ ನಾವು ಸಂತೋಷಿಸುತ್ತೇವೆ. ಆತನು ನಾವು ಯಾರನ್ನು ತಲುಪುತ್ತೇವೋ (ಸುವಾರ್ತೆ ತಲುಪುತ್ತದೋ) ಅವರನ್ನು ಸಹಾ ಪ್ರೀತಿಸುತ್ತಾನೆ. ಈ ವಿಷಯವು ಮತ್ತೊಬ್ಬರನ್ನು ತಲುಪುವಂತೆ ಹುರಿದುಂಬಿಸುತ್ತದೆ. ಆದರೆ ಆತನು ನಾವು ಯಾರೊಂದಿಗೆ ಚೆನ್ನಾಗಿಲ್ಲವೋ, ಯಾರನ್ನು ಕಂಡರೆ ಹೆದರುತ್ತೇವೆಯೋ ಅವರನ್ನೆಲ್ಲಾ ದೇವರು ಪ್ರೀತಿಸುತ್ತಾನೆ. ನಮಗಿಷ್ಟವಿಲ್ಲದವರನ್ನು ಪ್ರೀತಿಸುತ್ತಾನೆ. ಸೃಷ್ಟಿಯಲ್ಲಿ ಇದರ ಪ್ರತ್ಯಕ್ಷತೆಯನ್ನು ನಾವು ನೋಡುತ್ತೇವೆ. ಸತ್ಯವೇದವು ನಮ್ಮ ಸುತ್ತಲಿರುವ ಲೋಕದ ಕಡೆಗೆ ಬೊಟ್ಟುಮಾಡಿ ತೋರಿಸುತ್ತದೆ. ಆತನು ಸೂರ್ಯನನ್ನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ಮೂಡುವಂತೆ ಮಾಡುತ್ತಾನೆ. ನೀತಿವಂತರ ಮೇಲೂ ಅನೀತಿವಂತರ ಮೇಲೂ ಮಳೆಯನ್ನು ಸುರಿಸುತ್ತಾನೆ (ಮತ್ತಾಯ 5:45). ಜೀವನವೇ ದೇವರಿಂದ ಬಂದ ಒಂದು ವರವಾಗಿದೆ, ದೇವರಿಗೆ ನಮ್ಮ ವೈಯಕ್ತಿಕ ಸ್ಪಂದನೆ ಅಥವಾ ಧೋರಣೆಯು ಇಲ್ಲದೆ ಇದ್ದಾಗ್ಯೂ ಪ್ರತಿಯೊಬ್ಬರು ಈ ವರವನ್ನು ಪಡೆದವರಾಗಿದ್ದಾರೆ.

ಪ್ರತಿಯೊಬ್ಬರೂ ದೇವರಿಂದಲೇ ಸೃಷ್ಟಿ ಮಾಡಲ್ಪಟ್ಟಿದ್ದಾರೆ ಮತ್ತು ಪ್ರೀತಿಸಲ್ಪಡುತ್ತಾರೆಂಬುದನ್ನು ಕಂಡುಕೊಂಡಾಗ ಇತರರ ಬಗೆಗೆ ನಮ್ಮ ಧೋರಣೆ ಹೇಗೆ ಬದಲಾಗುತ್ತದೆ?

**ಸೋಮವಾರ** **ಸೆಪ್ಟೆಂಬರ್ 2**

# ಅನುಕಂಪ ಮತ್ತು ಪಶ್ಚಾತ್ತಾಪ

ರಕ್ಷಣೆ ಮತ್ತು ಮಹಾಹೋರಾಟದ ಕಥೆಗಳು ಒಟ್ಟಾಗಿ ನಮ್ಮ ಮತ್ತು ಲೋಕದ ತಿಳುವಳಿಕೆಗೆ ಆಧಾರವಾಗಿರುವ ಸತ್ಯವನ್ನು ಒಪ್ಪಿಕೊಳ್ಳಲು ಕರೆ ನೀಡುತ್ತವೆ. ನಾವು, ನಾವಿರುವ ಲೋಕವು ಬಿದ್ದುಹೋಗಿದೆ. ಮುರಿದು ಹೋಗಿದೆ ಮತ್ತು ಪಾಪದಲ್ಲಿದೆ. ನಮ್ಮ ಲೋಕವು ಹೇಗಿರಬೇಕೆಂದು ಸೃಷ್ಟಿಮಾಡಲ್ಪಟ್ಟಿತೋ ಹಾಗೆ ಇಲ್ಲ, ನಾವು ಇನ್ನೂ ನಮ್ಮನ್ನು ಸೃಷ್ಟಿಸಿದವನ ಪ್ರತಿರೂಪವನ್ನು ಹೊಂದಿದ್ದೇವೆ, ನಾವು ಲೋಕದ ವಿಘಟಿತದ (ಮುರಿದು ಹೋದುದರ) ಭಾಗವಾಗಿದ್ದೇವೆ. ನಮ್ಮೊಳಗಿರುವ ಪಾಪವು ಮತ್ತು ಲೋಕದಲ್ಲಿರುವ ಶೋಷಣೆ, ದಬ್ಬಾಳಿಕೆ, ನೋವುಗಳನ್ನುಂಟು ಮಾಡುವ ಕೆಟ್ಟತನವು ಒಂದೇ ತರದ ಸ್ವಭಾವವನ್ನು ಹೊಂದಿವೆ.

ಹಾಗಾಗಿ ನಮ್ಮ ಸುತ್ತಮುತ್ತಲೂ ಇರುವ ಜನರ ಮತ್ತು ಲೋಕದ ದುಃಖ, ಅನಾನುಕೂಲ, ದುರಂತ ಇವೆಲ್ಲವನ್ನೂ ಅರಿಯುವುದನ್ನು ಸರಿಯೆಂದು ಹೇಳಬಹುದು. ನೋವಿನ ಅರಿವು ನಮಗಾಗಬಾರದೆಂದುಕೊಂಡಿದ್ದರೆ ನಾವು ಯಂತ್ರಮಾನವರಾಗಿರಬೇಕಷ್ಟೆ.

ಕೀರ್ತನೆ ಪುಸ್ತಕದಲ್ಲಿರುವ ಪ್ರಲಾಪಗಳು, ಯೆರೆಮೀಯ ಮತ್ತು ಇತರ ಪ್ರವಾದಿಗಳ ದುಃಖವು ಯೇಸು ಕ್ರಿಸ್ತನ ಕನಿಕರದ ಕಂಬನಿಗಳು ಕೆಡುಕು ತುಂಬಿದ ಈ ಲೋಕಕ್ಕೆ ಸಮರ್ಪಕವಾದ ಪ್ರತಿಕ್ರಿಯೆಯನ್ನು ತೋರಿಸುತ್ತದೆ. ನಿರ್ದಿಷ್ಟವಾಗಿ ಯಾರು ಕೆಟ್ಟದ್ದರಿಂದ ಗಾಯಹೊಂದಿರುತ್ತಾರೋ ಅವರಿಗೆ ಸಮರ್ಪಕವಾದ ಸ್ಪಂದನೆಯಾಗಿದೆ, ಓದಿರಿ. ಮತ್ತಾಯ 9:36, ಲೂಕ 19:41 ಮತ್ತು ಯೋಹಾನ 11:35. ಈ ವಾಕ್ಯಗಳಲ್ಲಿರುವ ಯಾವ ವಿಷಯವು ಯೇಸುಕ್ರಿಸ್ತನನ್ನು ಕನಿಕರ ಪಡುವಂತೆ ಮಾಡಿದವು? ನಮ್ಮ ಸುತ್ತಲಿರುವ ನೋವಿಗೆ ನಾವು ಮೃದುವಾದ ಹೃದಯವನ್ನು ಹೊಂದುವುದು ಹೇಗೆ?

ನಾವು ಪಾಪ ಮತ್ತು ಕೆಡುಕುಗಳು ನ್ಯಾಯವಲ್ಲವೆಂಬುದನ್ನು ನೆನಪು ಮಾಡಿಕೊಳ್ಳಬೇಕು. ಪಾಪ ಮತ್ತು ಕೆಡುಕುಗಳು ಕೇವಲ ಹೊರಗಿನವು ಅಥವಾ ಮತ್ತೊಬ್ಬನ ವಿಫಲತೆ. ನಾವು ನಮ್ಮಲ್ಲಿ ಪಾಪವಿಲ್ಲವೆಂದು ಹೇಳಿದರೆ ನಾವು

ನಮ್ಮನ್ನು ಮೋಸಪಡಿಸಿಕೊಳ್ಳುತ್ತೇವೆ (1 ಯೋಹಾನ 1:8) ಸತ್ಯವೇದದ ಪ್ರವಾದನೆಗಳನ್ನು ಅರ್ಥಮಾಡಿಕೊಳ್ಳುವುದಾದರೆ ಪಾಪವೆಂಬುದು ದುರಂತ ಮಯವಾದದ್ದಾಗಿದ್ದು, ಇದು ಕೇವಲ ಒಬ್ಬನು ನೇಮಗಳನ್ನು ಉಲ್ಲಂಘಿಸುವುದರಿಂದ ಆಗುವುದಿಲ್ಲ. ಆದರೆ ಪಾಪವು ದೇವರ ಮತ್ತು ಮನುಷ್ಯನ ನಡುವಿನ ಸಂಬಂಧವನ್ನು ಮುರಿಯುತ್ತದೆ ಮತ್ತು ಪಾಪವು ಮತ್ತೊಬ್ಬರನ್ನು ಗಾಯಗೊಳಿಸುತ್ತದೆ. ಇದು ಸಣ್ಣದ್ದಾಗಿರಬಹುದು ಇಲ್ಲವೇ ದೊಡ್ಡದಾಗಿರಬಹುದು. ಆದರೆ ಇದು ಒಂದೇ ತರದ ಕೆಟ್ಟತನವಾಗಿದೆ.

ಸ್ವಾರ್ಥತೆ, ದುರಾಶೆ, ನೀಚತನ, ಪೂರ್ವಾಗ್ರಹ, ಅಜ್ಞಾನ ಮತ್ತು ನಿಷ್ಕಾಳಜಿ ಇವೆಲ್ಲವೂ ಲೋಕದಲ್ಲಿರುವ ಕೆಟ್ಟತನ, ಅನ್ಯಾಯ, ಬಡತನ ಮತ್ತು ತುಳಿತದ ಬೇರುಗಳಾಗಿವೆ. ನಮ್ಮ ಪಾಪಗಳನ್ನು ಒಪ್ಪಿಕೊಳ್ಳುವುದು (ಅರಿಕೆ ಮಾಡುವುದು) ಕೆಟ್ಟತನವನ್ನು ಬಿಡುವ ಮೊದಲ ಮೆಟ್ಟಿಲಾಗಿದೆ ಮತ್ತು ದೇವರ ಪ್ರೀತಿಯು ನಮ್ಮ ಹೃದಯದಲ್ಲಿ ನೆಲೆಸುವುದಕ್ಕೂ ಸಹ ಮೊದಲ ಮೆಟ್ಟಿಲಾಗಿದೆ. ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು (1 ಯೋಹಾನ 1:9).

ನಿಮ್ಮನ್ನು ನೀವೇ ನೋಡಿಕೊಳ್ಳಿರಿ.... (ಬಹಳ ಹತ್ತಿರವಾಗಿ ಇಲ್ಲವೇ ಬಹಳ ದೂರವಾಗಿಯೂ ಅಲ್ಲ).

ಯಾವ ರೀತಿಯಲ್ಲಿ ನೀನು ಮುರಿದವನಾಗಿದ್ದು ದೊಡ್ಡ ಸಮಸ್ಯೆಯ ಭಾಗವಾಗಿರುವೆ? ಯಾವುದು ಅದಕ್ಕಿರುವ ಒಂದೇ ಉತ್ತರ ಮತ್ತು ಒಂದೇ ಸ್ಥಳ?

**ಮಂಗಳವಾರ** **ಸೆಪ್ಟೆಂಬರ್ 3**

## ಕೃಪೆ ಮತ್ತು ದೇವರ ಕ್ರಿಯೆಗಳು

ನಿಮ್ಮ ಸ್ವಂತ ವಾಕ್ಯದಲ್ಲಿ ಎಫೆಸ 2:8–10ನ್ನು ಸಂಕ್ಷಿಪ್ತಪಡಿಸಿ ಹೇಳಿರಿ. ಈ ವಾಕ್ಯಗಳು ಕೃಪೆ ಮತ್ತು ಸತ್ಕ್ರಿಯೆಗಳ ನಡುವೆ ಇರುವ ಸಂಬಂಧದ ಬಗ್ಗೆ ಏನು ಹೇಳುತ್ತವೆ?

ಅನೇಕ ವಿಷಯಗಳಲ್ಲಿ ಸತ್ಯವೇದವು ನಾವು ದೇವರನ್ನು ಆರಾಧಿಸುವುದಕ್ಕೂ ಇತರರಿಗೆ ಸೇವೆ ಮಾಡುವುದಕ್ಕೂ ಸೃಷ್ಟಿಸಲ್ಪಟ್ಟಿದ್ದೇವೆ ಎಂದು ಹೇಳುತ್ತದೆ.

ಕೇವಲ ನಮ್ಮ ಕಲ್ಪನೆಯಲ್ಲಿ ಮಾತ್ರ ಪಾಪರಹಿತ ಪರಿಸರದಲ್ಲಿ ಇವೆರಡು ಕೃತ್ಯಗಳು ಹೇಗಿರುತ್ತವೆ ಎಂದು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬಹುದು.

ಈವಾಗ ಪಾಪದ ನಿಮಿತ್ತ ನಮಗೆ ಮುರಿದುಹೋದ ಮತ್ತು ಬಿದ್ದುಹೋದ ಲೋಕವು ಮಾತ್ರ ತಿಳಿದಿದೆ. ಸೌಭಾಗ್ಯವೇನೆಂದರೆ ದೇವರ ಕೃಪೆಯು ಯೇಸುಕ್ರಿಸ್ತನು ಲೋಕದ ಪಾಪಗಳಿಗೆ ಬಲಿಯಾದುದರಲ್ಲಿ ವ್ಯಕ್ತ ಮತ್ತು ಪ್ರದರ್ಶಿತವಾಗಿದ್ದು ಕ್ಷಮಾಪಣೆ ಮತ್ತು ಸ್ವಸ್ಥತೆಗೆ ದಾರಿ ತೆರೆಯುತ್ತದೆ. ಹಾಗಾಗಿ ಮುರಿದ ಅಸ್ತಿತ್ವದ ನಡುವೆಯೂ ನಮ್ಮ ಜೀವನವೂ ಪೂರ್ಣವಾಗಿ ದೇವರ ಕೈಕೆಲಸವಾಗಿದ್ದು ನಾವು ಕೂಡ ಇತರರಿಗಾದ ಹಾನಿಯನ್ನು ಭರಿಸುವುದಕ್ಕೆ ಪಾಲುದಾರರನ್ನಾಗಿ ದೇವರು ನಮ್ಮನ್ನು ಉಪಯೋಗಿಸುತ್ತಾನೆ (ಎಫೆಸ 2:10). "ಯಾರು ಪಡೆದಿರುತ್ತಾರೋ ಅವರು ಇತರರಿಗೆ ಕೊಡುವವರಾಗಿರಬೇಕು. ಎಲ್ಲಾ ದಿಕ್ಕಿನಿಂದಲೂ ಸಹಾಯಕ್ಕಾಗಿ ಕರೆ ಬರುತ್ತದೆ. ದೇವರು ಮನುಷ್ಯರನ್ನು ತಮ್ಮ ನೆರೆಹೊರೆಯವರಿಗೆ ಸಂತೋಷದಿಂದ ಸಹಾಯ ಮಾಡಲು ಕರೆಯುತ್ತಾನೆ– ಎಲೆನ್ ಜಿ ವೈಟ್‌ನವರ ಮಿನಿಸ್ಟ್ರಿ ಆಫ್ ಹೀಲಿಂಗ್ಸ್, ಪುಟ 103.

ನಾವು ಸತ್ಕ್ರಿಯೆಗಳನ್ನು ಮಾಡುವುದು, ಬಡವರನ್ನು ಪರಾಮರಿಸುವುದು, ತುಳಿತಕ್ಕೊಳಗಾದವರನ್ನು ಎತ್ತುವುದು, ಹಸಿದವರಿಗೆ ಆಹಾರವನ್ನೀಯುವುದು, ನಮ್ಮ ರಕ್ಷಣೆಯನ್ನು ಸಂಪಾದಿಸಿಕೊಳ್ಳುವುದಕ್ಕೋಸ್ಕರ ಅಥವಾ ದೇವರೊಂದಿಗೆ ನಿಂತುಕೊಳ್ಳುವುದಕ್ಕಲ್ಲ, ನಂಬಿಕೆಯಿಂದ ಕ್ರಿಸ್ತನಲ್ಲಿ ಮಾತ್ರ ನಾವು ದೇವರೊಂದಿಗೆ ನಿಂತುಕೊಳ್ಳುತ್ತೇವೆ. ನಾವು ನಮ್ಮನ್ನು ಪಾಪಿಗಳನ್ನಾಗಿ ಮತ್ತು ಬಲಿಪಶುಗಳನ್ನಾಗಿ ಅರಿಯುತ್ತೇವೆ. ಆದಾಗ್ಯೂ ದೇವರಿಂದ ಪ್ರೀತಿಸಲ್ಪಡುತ್ತೇವೆ, ಮತ್ತು ವಿಮೋಚಿಸಲ್ಪಡುತ್ತೇವೆ.

ನಾವು ನಮ್ಮ ಸ್ವಾರ್ಥತೆಗೆ ಮತ್ತು ದುರಾಶೆಗೆ ಇನ್ನೂ ಹೋರಾಡುತ್ತಿರುವಾಗಲೇ ದೇವರು ಸ್ವತ್ಯಾಗದ ವಿನೀತ ಕೃಪೆಯು ಒಂದು ಹೊಸ ಬಗೆಯ ಜೀವಿತವನ್ನು ಮತ್ತು ಜೀವಿತವನ್ನು ಪರಿವರ್ತಿಸುವ ಪ್ರೀತಿಯನ್ನು ನಮಗೆ ಕೊಡುತ್ತದೆ.

ನಾವು ಶಿಲುಬೆಯ ಕಡೆಗೆ ನೋಡುವಾಗ ನಾವು ನಮಗಾಗಿ ಮಾಡಿದ ಪರಿಪೂರ್ಣ ಮತ್ತು ಮಹಾತ್ಯಾಗವನ್ನು ಅರಿತುಕೊಳ್ಳುತ್ತೇವೆ. ಕ್ರಿಸ್ತನು ಮಾಡಿರುವುದಕ್ಕೆ ಪ್ರತಿಯಾಗಿ ಏನನ್ನು ಮಾಡಬಾರದೆಂಬ ಅರ್ಥವು ಬರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಾವು ಪ್ರತಿಸ್ಪಂದಿಸಬೇಕು. ನಮಗೆ ತೋರಿದ ಪ್ರೀತಿಗೆ ಪ್ರತಿಯಾಗಿ ನಾವು ಮತ್ತೊಬ್ಬರಿಗೆ ಪ್ರೀತಿ ತೋರಿಸುವುದಕ್ಕಿಂತ ಬೇರೆ ಬಗೆಯಾದ ಸ್ಪಂದನೆ ಯಾವುದು?

ಓದಿರಿ 1 ಯೋಹಾನ 3:16,17 ಕ್ರಿಸ್ತನ ಶಿಲುಬೆಗೆ ಯಾವ ಸ್ಪಂದನೆ ಇರಬೇಕೋ ಅದನ್ನು ಈ ವಾಕ್ಯಗಳು ಹೇಗೆ ಸೆರೆಹಿಡಿದಿವೆ?

**ಬುಧವಾರ** **ಸೆಪ್ಟೆಂಬರ್ 4**

## ನಮ್ಮ ಸಾಮಾನ್ಯ (ಸಾರ್ವತ್ರಿಕ) ಮಾನವತೆ

ಕ್ರಿಸ್ತನು ತನ್ನ ಸುವಾರ್ತಾ ಸೇವೆ ಮತ್ತು ಬೋಧನೆಗಳಿಂದ ಎಲ್ಲರನ್ನೂ ಬಳಗೊಳಿಸುವುದಕ್ಕೆ ಪ್ರೇರಿಸಿದನು. ದುರಾಚಾರಿ ಹೆಂಗಸರು, ಸುಂಕದವರು, ಕುಷ್ಠರೋಗಿಗಳು, ಸಮಾರ್ಯದವರು, ರೋಮನ್ನರ ಶತಾಧಿಪತಿಗಳು, ಧಾರ್ಮಿಕ ನಾಯಕರು ಅಥವಾ ಮಕ್ಕಳು ಅಂತು ಯಾರ್‍ಯಾರು ಪ್ರಾಮಾಣಿಕವಾಗಿ ಆತನ ಗಮನವನ್ನು ಸೆಳೆದರೋ ಅವರನ್ನೆಲ್ಲಾ ಸ್ನೇಹಶೀಲತೆ ಮತ್ತು ಕಾಳಜಿಯುಳ್ಳವನಾಗಿ ತನ್ನೆಡೆಗೆ ಸ್ವಾಗತಿಸಿದನು. ಆದಿಸಭೆಯು ಪರಿವರ್ತನೆಯ ವಿಧಾನಗಳನ್ನು ಕಂಡುಕೊಳ್ಳಬೇಕಾಗಿತ್ತು. ರಕ್ಷಣೆಯ ವರವನ್ನು ಕೊಡುವ ಕೆಲಸವು ಅವುಗಳಲ್ಲಿ ಒಂದಾಗಿತ್ತು.

ಮೊಟ್ಟ ಮೊದಲ ವಿಶ್ವಾಸಿಗಳು ನಿಧಾನವಾಗಿ ಸುವಾರ್ತೆಯ ಸಮಗ್ರತೆಯನ್ನು ಕಂಡುಕೊಂಡರು ಅವರು ಮತ್ತೊಬ್ಬರಿಗೆ ಒಳ್ಳೆಯದನ್ನು ಮಾಡಿದರೆ ಚೆನ್ನಾಗಿರುತ್ತದೆ ಎಂದುಕೊಂಡು ಒಳ್ಳೆಯ ಕೆಲಸಗಳನ್ನು ಮಾಡುತ್ತಿರಲಿಲ್ಲ. ಅವರು ಕ್ರಿಸ್ತನ ಜೀವನ, ಸೇವೆ ಮತ್ತು ಮರಣದ ಅನುಭವ ಹೊಂದಿದ್ದರಿಂದ ಒಳ್ಳೆಯ ಕೆಲಸಗಳು ಅವರು ಸುವಾರ್ತೆಯನ್ನು ಅರ್ಥ ಮಾಡಿಕೊಂಡಿದುದಕ್ಕೆ ತಿರುಳಾಗಿತ್ತು.

ಆದಿಸಭೆಯಲ್ಲಿ ಅನೇಕ ವಿಷಯಗಳಲ್ಲಿ ವಿಶ್ವಾಸಿಗಳು ಪ್ರಶ್ನೆ ಎತ್ತುತ್ತಿದ್ದರಿಂದ ಅವರಿಗೂ ಪೌಲ ಪೇತ್ರರಿಗೂ ಹೋರಾಟ ನಡೆಯುತ್ತಿರುತ್ತಿತ್ತು (ಉದಾಹರಣೆಗೆ

ಅ.ಕೃ. 10:9–20ನ್ನು ನೋಡಿರಿ). ಇಡೀ ಸಭೆಯುವರ ಸ್ಪಷ್ಟತೆಗಾಗಿ ಯೆರೂಸಲೇಮಿನಲ್ಲಿ ಒಕ್ಕೂಟ ಸೇರಿತು (ಅ.ಕೃ. 15ನೇ ಅಧ್ಯಾಯ ನೋಡಿರಿ). ನಂಬಿದವರು ಹೇಗೆ ಬದುಕಬೇಕೆಂಬುದನ್ನು ದೈವಪ್ರೀತಿಯನ್ನು ಆತನ ಸಮಗ್ರತೆಯನ್ನು ಅವರ ಅರಿವಿಗೆ ತಂದಿದ್ದ ಸುವಾರ್ತೆಯ ವ್ಯಾಪ್ತಿ ಒಮ್ಮೆಲೆ ಬದಲಾದುದನ್ನು ಮನಗಂಡರು.

ಕೆಳಗೆ ಕೊಟ್ಟಿರುವ ಸತ್ಯವೇದ ಪಠ್ಯಗಳು ಮಾನವತೆಯ ಸಾರ್ವತ್ರಿಕತೆ ಬಗ್ಗೆ ಏನನ್ನು ಬೋಧಿಸುತ್ತವೆ?

ಇಲ್ಲಿರುವ ಪ್ರತಿ ಆಲೋಚನೆಯು ನಾವು ಮತ್ತೊಬ್ಬರ ಮೇಲೆ ತೋರುವ ಧೋರಣೆಯ ಮೇಲೆಯೂ ಹೇಗೆ ಪ್ರಭಾವ ಬೀರುತ್ತದೆ?

ಮಲಾಕಿ 2:10..........................

ಅ.ಕೃ. 17:6 ............................

ರೋಮ 3:23 ........................

ಗಲಾತ್ಯ 3:28 .........................

ಗಲಾತ್ಯ 3:28– ಯೇಸುಕ್ರಿಸ್ತನು ಒಳ್ಳೆಯ ಸಮಾರ್ಯದವನ ಬಗ್ಗೆ ಹೇಳಿದ ಕಥೆಯ ತಾತ್ವಿಕ ತಾತ್ಪರ್ಯವಾಗಿದೆ. ನಾವು ಯಾರ ಸೇವೆ ಮಾಡಬೇಕು ಎಂದು ವಾಗ್ವಾದ ಮಾಡುವುದಕ್ಕಿಂತ ಸುಮ್ಮನೆ ಹೋಗಿ ಜನರ ಸೇವೆ ಮಾಡಬೇಕು. ನಮ್ಮ ಸೇವೆಯುನ್ನು ನಿರೀಕ್ಷಿಸದ ಜನರಿಂದಲೂ ಸಹ ನಾವು ಸೇವೆ ಮಾಡಿಸಿಕೊಳ್ಳುವುದಕ್ಕೆ ಸಿದ್ಧರಾಗಿರಬೇಕು. ನಮ್ಮನ್ನು ಒಂದಾಗಿರಲು ಕರೆಯುವ ದೇವರ ಪ್ರೀತಿಯಿಂದಲೂ, ಸುವಾರ್ತೆಯಿಂದಲೂ ಕಟ್ಟಲ್ಪಟ್ಟ ಸಾಮಾನ್ಯ ಕುಟುಂಬವು ಜಾಗತಿಕ ಸಾಮಾನ್ಯ ಕುಟುಂಬದ ಐಕ್ಯತೆಗೆ ಸಾಮಾನ್ಯ ಅಂಶವು ಯಾವುದೆಂದು ಸ್ಪಷ್ಟವಾಗಿ ತಿಳಿಸುತ್ತದೆ. "ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರೂ ಒಂದೇ ದೇಹವಾಗುವುದಕ್ಕಾಗಿ ಒಂದೇ ಆತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು" (1 ಕೊರಿಂಥ 12:13).

**ಗುರುವಾರ** **ಸೆಪ್ಟೆಂಬರ್ 5**

## ನಿತ್ಯವಾದ ಶುಭವರ್ತಮಾನ

ನಮ್ಮನ್ನು ಪರಿವರ್ತನೆ ಮಾಡುವ ಆಮಂತ್ರಣವು ಮತ್ತು ಎಲ್ಲಾ ಜನಾಂಗಕ್ಕೂ ಕುಲ ಭಾಷೆ ಪ್ರಜೆಗಳಿಗೂ ಶುಭವರ್ತಮಾನದ ಮನವಿಯೂ ಕ್ರೈಸ್ತ ಚರಿತ್ರೆಯಾದ್ಯಂತ ಮುಂದುವರೆದುಕೊಂಡು ಬಂದಿದೆ. ಹೇಗಾದರೂ, ಪ್ರಕಟನೆ 14 ಈ ಸಂದೇಶದ ನವೀಕೃತ ಘೋಷಣೆಯನ್ನು ವಿವರಿಸುತ್ತದೆ. ಅಂತ್ಯಕಾಲದಲ್ಲಿ ಕ್ರಿಸ್ತನ ಮತ್ತು ಎಲ್ಲವನ್ನೂ ಒಳಪಡಿಸುವ ಕುರಿತ ಶುಭಸಂದೇಶ ಇದಾಗಿದೆ.

ಓದಿರಿ ಪ್ರಕಟನೆ 14:6,7. ಹೇಗೆ ಸುವಾರ್ತೆಯ ಸಾಮಾನ್ಯವಾದ ಅರಿವು– ಯೋಹಾನ 3:16ರ ಅತಿ ಸಾಮಾನ್ಯವಾದ ತಾತ್ಪರ್ಯವಾಗಿದೆ?

ಪ್ರಕಟನೆ 14:7 ಒಟ್ಟಾಗಿ ಮೂರು ಮುಖ್ಯವಾದ ಅಂಶಗಳನ್ನು ತರುತ್ತದೆ. ಇದರಲ್ಲಿ ಸತ್ಯವೇದದಾದ್ಯಂತ ಕೆಟ್ಟತನ, ಬಡತನ ಮತ್ತು ದಬ್ಬಾಳಿಕೆ ಇವುಗಳ ಬಗ್ಗೆ ದೇವರು ಆಸಕ್ತಿ ವಹಿಸುವುದನ್ನು (ಕಾಳಜಿಯನ್ನು) ಈಗಾಗಲೇ ಗಮನಿಸಿದ್ದೇವೆ.

**ನ್ಯಾಯತೀರ್ಪು :** ನ್ಯಾಯಸ್ಥಾಪನೆಗಾಗಿ ನ್ಯಾಯವಿಚಾರಣೆ ಮಾಡುವುದಕ್ಕೆ ಯಾರ್‍ಯಾರು ಚರಿತ್ರೆಯಾದ್ಯಂತ ಶೋಷಣೆಗೆ (ತುಳಿತಕ್ಕೆ) ಒಳಗಾಗಿರುತ್ತಾರೋ ಅವರು ನ್ಯಾಯಕ್ಕಾಗಿ ವಿಚಾರಣೆಯಾಗಬೇಕೆಂದು ಮೊರೆ ಇಡುತ್ತಾರೆ. ಸುದೈವವೇನೆಂದರೆ ಸತ್ಯವೇದವು ದೇವರನ್ನು ತುಳಿಯಲ್ಪಟ್ಟವರ ಮೊರೆಗೆ ಕಿವಿಗೊಡುತ್ತಾನೆಂದು ಚಿತ್ರಿಸುತ್ತದೆ. ಯಾರು ನ್ಯಾಯವಾಗಿರುತ್ತಾರೋ, ಅವರಿಗೆ ನ್ಯಾಯತೀರ್ಪು ಶುಭವರ್ತಮಾನವಾಗಿ ಇರುತ್ತದೆಯೆಂದು ಗ್ರಂಥದಲ್ಲಿ ವರ್ಣಿಸಿದೆ.

**ಆರಾಧನೆ :** ಯೆಹೂದ್ಯ ಪ್ರವಾದಿಗಳ ಬರಹಗಳು ಆರಾಧನೆ ಮತ್ತು ಒಳ್ಳೆಯ ಕ್ರಿಯೆಗಳ ವಿಷಯಗಳನ್ನು ಒಟ್ಟಾಗಿ ಜೋಡಿಸುತ್ತವೆ. ತಮ್ಮನ್ನು ದೇವಜನರೆಂದು ಕರೆದುಕೊಂಡು ಕೆಟ್ಟದ್ದನ್ನು ಮಾಡುತ್ತಾ ಅದನ್ನೇ ಮುಂದುವರೆಸಿಕೊಂಡು ಹೋಗುವವರ ವಿಷಯಗಳನ್ನು ಬರೆದಿದ್ದಾರೆ. ಉದಾಹರಣೆಗೆ– ಯೆಶಾಯ 58ನೇ ಅಧ್ಯಾಯದಲ್ಲಿ ದೇವರು ತಾನು ಇಷ್ಟಪಡುವ ಆರಾಧನೆಯು ದಯೆಯ ಕೃತ್ಯಗಳು ಮತ್ತು ಬಡವರನ್ನೂ, ಕೊರತೆಯುಳ್ಳವರನ್ನೂ ಪರಾಂಬರಿಸುವುದೇ ಆಗಿದೆ ನೋಡಿರಿ (ಯೆಶಾಯ 58:6,7).

**ಸೃಷ್ಟಿ :** ನಾವು ನೋಡಿದಂತೆ ದೇವರ ನ್ಯಾಯಕ್ಕೆ ಮೂಲಾಧಾರವಾದವುಗಳಲ್ಲಿ ಮಾನವತೆಯ ಸಾಮಾನ್ಯ ಕುಟುಂಬವು ಒಂದಾಗಿದೆ. ನಾವೆಲ್ಲರೂ ಆತನ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟು ಆತನ ದೃಷ್ಟಿಯಲ್ಲಿ ಮೌಲ್ಯವುಳ್ಳವರಾಗಿದ್ದೇವೆ. ಆದುದರಿಂದ ಯಾರೂ ತಮ್ಮ ಸ್ವಲಾಭಕ್ಕಾಗಿ ಯಾರನ್ನೂ ವಂಚಿಸಿ ಮೋಸ ಪಡಿಸಬಾರದು. ಈ ಅಂತ್ಯಕಾಲದ ಶುಭವರ್ತಮಾನವು ದೇವರು ಪಾಪದಲ್ಲಿ ಬಿದ್ದ ಮಾನವತೆಯನ್ನು ಪಾರುಮಾಡಿ, ವಿಮೋಚಿಸಿ, ಪುನರ್‌ಸ್ಥಾಪನೆಯನ್ನು ಮಾಡುವ ವಿಶಾಲವಾದ ಮತ್ತು ದೂರಸಾಗುವ ಬಲವುಳ್ಳದ್ದಾಗಿದೆ. ಆದುದರಿಂದ ಸತ್ಯ ಆರಾಧನೆ ಮತ್ತು ಮಿಥ್ಯಾರಾಧನೆ ನಡುವೆ ಇರುವ ಎಲ್ಲಾ ವಿವಾದಗಳ ನಡುವೆಯೂ (ಪ್ರಕ 14:8–12ನ್ನು ನೋಡಿರಿ), ದೇವರು ಸತ್ಯಕ್ಕಾಗಿ ನಿಲ್ಲುವ ಜನರನ್ನು ತನ್ನ ಆಜ್ಞೆಗಳನ್ನು ಪಾಲಿಸಿ, ಯೇಸುವಿನ ಸಾಕ್ಷಿಯನ್ನು ಹೊಂದಿರುವವರನ್ನು ಇಟ್ಟಿದ್ದಾನೆ.

ಮೂರು ದೂತರ ಸಂದೇಶದಲ್ಲಿರುವ ನಂಬಿಕೆ ಮತ್ತು ಎಚ್ಚರಿಕೆಗಳನ್ನು ಹಂಚಿಕೊಳ್ಳುವವರಾಗಿ ಹೇಗೆ ಕೊರತೆಯಲ್ಲಿರುವವರ ಸೇವೆಯ ವಿಧಾನಗಳನ್ನು ಕಂಡುಕೊಳ್ಳುತ್ತೇವೆ?

**ಶುಕ್ರವಾರ** **ಸೆಪ್ಟೆಂಬರ್ 6**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ "ದಿ ಡಿಸೈರ್ ಆಫ್ ಏಜಸ್" ಪುಸ್ತಕದಲ್ಲಿ ದೇವರು ನಮ್ಮೊಂದಿಗಿದ್ದಾನೆ" ಅಧ್ಯಾಯದಲ್ಲಿ ಪುಟ 19–26.

ಮಿನಿಸ್ಟ್ರಿ ಆಫ್ ಹೀಲಿಂಗ್ಸ್ ಪುಸ್ತಕದಲ್ಲಿ "ಸೇವ್ಡ್ ಟು ಸರ್ವ್" ಅಧ್ಯಾಯದಲ್ಲಿ ಪುಟ 95–107.

ದೇವರು ಇಡೀ ಲೋಕವನ್ನೇ (ಭೂಲೋಕವನ್ನೇ) ತನ್ನ ತೋಟವೆಂದು ಕರೆಯುತ್ತಾನೆ. ಈವಾಗ ಅದು ಇಹಲೋಕಾಧಿಪತಿಯ ಕೈಗಳಲ್ಲಿದ್ದಾಗ್ಯೂ ದೇವರಿಗೆ ಸೇರಿದುದಾಗಿದೆ. ಸೃಷ್ಟಿಸಲ್ಪಟ್ಟಾಗ ಆತನದಾಗಿದ್ದಂತೆಯೇ ವಿಮೋಚಿಸಲ್ಪಟ್ಟಾಗ ಇನ್ನೂ ಹೆಚ್ಚಾಗಿ ಆತನದ್ದಾಗಿರುತ್ತದೆ. ಈ ಲೋಕದ ಸಲುವಾಗಿಯೇ ಕ್ರಿಸ್ತನ 'ತ್ಯಾಗಬಲಿ' ಸಲ್ಲಿಸಲ್ಪಟ್ಟಿತು. ದೇವರು ಈ ಲೋಕವನ್ನು ಎಷ್ಟೋ ಪ್ರೀತಿ ಮಾಡಿ ತನ್ನ ಒಬ್ಬನೇ ಮಗನನ್ನು ಕೊಟ್ಟನು (ಯೋಹಾನ 3:16). ಆ ಒಂದು

ಬಹುಮಾನದ ಜೊತೆ ಎಲ್ಲವನ್ನೂ ಮನುಷ್ಯನಿಗೆ ಕೊಟ್ಟನು. ಪ್ರತಿನಿತ್ಯವು ಇಡೀ ಲೋಕವೇ ಆತನಿಂದ ಆಶೀರ್ವಾದವನ್ನು ಪಡೆಯುತ್ತದೆ. ಮಳೆಯ ಪ್ರತಿ ಹನಿಯಲ್ಲೂ, ಕೃತಜ್ಞತೆ ತೋರದ ಮಾನವ ಸಂತತಿಯ ಮೇಲೆ ಬೀಳುವ ಸೂರ್ಯನ ಒಂದೊಂದು ಕಿರಣಗಳು ಪ್ರತಿ ಎಲೆ, ಹೂವು ಮತ್ತು ಹಣ್ಣು ದೇವರ ದೀರ್ಘ ಶಾಂತಿಗೆ ಮತ್ತು ಆತನ ಮಹಾಪ್ರೀತಿಗೆ ಸಾಕ್ಷಿ ಹೇಳುತ್ತವೆ– ಎಲೆನ್ ಜಿ ವೈಟಮ್ಮನವರ ಕ್ರೈಸ್ಟ್ಸ ಆಬ್ಜೆಕ್ಟ್ ಲೆಸೆನ್ಸ್, ಪುಟ 301,302. ನೀವೆಲ್ಲರೂ ಕ್ರಿಸ್ತಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ ಗಂಡು–ಹೆಣ್ಣು ಎಂದು ಭೇದವಿಲ್ಲ. ನೀವು ಕ್ರಿಸ್ತಯೇಸುವನ್ನು ಸೇರಿದವರಾಗಿದ್ದ ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ (ಗಲಾತ್ಯ 3:28, ಎಫೆ 2:13).

ಧಾರ್ಮಿಕ ನಂಬಿಕೆಯಲ್ಲಿ ಏನೇ ಭಿನ್ನತೆಯಿದ್ದರೂ, ಕಷ್ಟಪಡುತ್ತಿರುವವರ ಕಡೆಗೆ ಓಗೊಟ್ಟು ಉತ್ತರ ನೀಡಬೇಕು. ನಮ್ಮ ಸುತ್ತಮುತ್ತೆಲ್ಲಾ ಇರುವವರು ಬಡವರು, ಶೋಧಿತ ಆತ್ಮಗಳು. ಇವುಗಳಿಗೆ ನಮ್ಮ ಸಾಂತ್ವಾನದ ಮಾತುಗಳ ನೆರವಿಗೆ ಕೃತ್ಯಗಳು ಬೇಕಾಗಿದೆ.

ಅನುಕಂಪ ಮತ್ತು ಸಹಾಯದ ಅವಶ್ಯಕತೆಯಿರುವ ಅನೇಕ ವಿಧವೆಯರಿದ್ದಾರೆ. ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ದತ್ತಿ ಎಂಬಂತೆ ಸ್ವೀಕರಿಸಿರಿ ಎಂದು ಹೇಳಿದ ಅನಾಥರಿದ್ದಾರೆ. ಬಹಳ ಸಲ ಇವರು ಉಪೇಕ್ಷೆಗೆ ಒಳಗಾಗುತ್ತಾರೆ. ಅವರು ಚಿಂದಿಯುಟ್ಟವರಾಗಿರಬಹುದು, ಅವಲಕ್ಷಣದವರಾಗಿರಬಹುದು, ನೊಂದು ಹೃದಯಕ್ಕೆ ಎಲ್ಲಾ ವಿಧದಲ್ಲೂ ಅನಾಕರ್ಷರಾಗಿರಬಹುದು. ಆದಾಗ್ಯೂ ಅವರೆಲ್ಲಾ ದೇವರ ಆಸ್ತಿಯಾಗಿದ್ದಾರೆ. ಅವರು ಸಹಾ ಬೆಲೆ ಕೊಟ್ಟುಕೊಳ್ಳಲ್ಪಟ್ಟವರಾಗಿದ್ದಾರೆ. ಕ್ರಿಸ್ತನು ಅವರನ್ನು ನಮ್ಮಷ್ಟೇ ಅಮೂಲ್ಯರನ್ನಾಗಿ ಕಾಣುತ್ತಾನೆ.

ಅವರು ದೇವರ ಮಹಾಮನೆಯ ಸದಸ್ಯರಾಗಿದ್ದಾರೆ. ಕ್ರೈಸ್ತರು ಅವರ ಪಾರುಪತ್ಯರಾಗಿದ್ದು ಅವರ ಜವಾಬ್ದಾರಿಯನ್ನು ಹೊಂದಿರುತ್ತಾರೆ– ಎಲೆನ್ ಜಿ ವೈಟಮ್ಮನವರ ಕ್ರೈಸ್ಟ್ ಆಬ್ಜೆಕ್ಟ್ ಲೆಸನ್ಸ್ ಪುಸ್ತಕದ ಪುಟ 386, 387.

## ಚರ್ಚಿಸಬೇಕಾದ ಪ್ರಶ್ನೆಗಳು

1. ಒಳ್ಳೆಯ ಕ್ರಿಯೆಗಳನ್ನು ಮಾಡುವವರಾಗಿ ಇತರರಿಗೆ ಸಹಾಯ ಮಾಡುವಾಗ ನಾವು ಉತ್ತಮರಾಗಿ ಪುಣ್ಯಗಳಿಸುತ್ತೇವೆ ಎಂಬ ಶೋಧನೆಯನ್ನು ಹೇಗೆ ಪ್ರತಿರೋಧಿಸುತ್ತೇವೆ?

2. ನಿಮ್ಮ ಸಭೆಯು ಯಾವ ಭಿನ್ನತೆಯಿಲ್ಲದೇ ಎಲ್ಲರೂ ಕ್ರಿಸ್ತನಲ್ಲಿ ಒಂದಾಗಿದ್ದೀರಾ? ಇದು ಹೆಚ್ಚಾಗುವುದು ಹೇಗೆ? ನಿಮ್ಮ ಸಭೆಯು ಎಲ್ಲರನ್ನೂ ಒಳಗೊಂಡಿರುವುದೆ?

3. ಕೊರತೆಯಲ್ಲಿರುವವರಿಗೆ ಒಳ್ಳೇದನ್ನು ಮಾಡುವುದಕ್ಕೆ ಮತ್ತು ಅವರು ಕೊರತೆಯಲ್ಲಿದ್ದಾರೆ ಎಂಬ ಕಾರಣ ಹೊರತುಪಡಿಸಿ ಅದೇ ಸಂದರ್ಭದಲ್ಲಿ ಅವರಿಗೆ ಸುವಾರ್ತೆ ಮತ್ತು ಸತ್ಯಗಳನ್ನು ಹೇಳುವಾಗ ಹೇಗೆ ಸಮತೋಲನ ಕಂಡುಕೊಳ್ಳಬಹುದು?

   ಹೇಗೆ ಸಹಾಯ ಮತ್ತು ಸುವಾರ್ತೆ ಎರಡನ್ನೂ ಮಾಡುವುದಕ್ಕೆ ಕಲಿಯುತ್ತೇವೆ ಮತ್ತು ಯಾವಾಗಲೂ ಎರಡನ್ನೂ ಮಾಡುವುದು ಉತ್ತಮ ಏಕೆ?

**ಸಾರಾಂಶ :** ದೇವರ ಪ್ರೀತಿಯು ರಕ್ಷಣೆಯ ಯೋಜನೆಯಲ್ಲಿ ವ್ಯಕ್ತವಾಗಿ ಕ್ರಿಸ್ತನ ಬಲಿದಾನವು ಕ್ಷಮಾಪಣೆ, ಜೀವನ ಮತ್ತು ನಿರೀಕ್ಷೆ ಕೊಡುತ್ತದೆ. ನಾವು ಕೃಪೆಯನ್ನು ಪಡೆದಿರುವುದರಿಂದ ಅದನ್ನು ಇತರರಿಗೆ ಹಂಚುವವರಾಗಿರಬೇಕು. ಇದನ್ನು ನಮ್ಮ ರಕ್ಷಣೆಗೆ ಮಾಡುವುದಲ್ಲ. ಆದರೆ ಇದಕ್ಕಾಗಿಯೇ ನಾವು ಸೃಷ್ಟಿ ಮಾಡಲ್ಪಟ್ಟಿದ್ದೇವೆ. ಹೀಗಿರಲಾಗಿ ಸುವಾರ್ತೆಯು ನಮ್ಮ ಸಂಬಂಧವನ್ನು ಪರಿವರ್ತಿಸುತ್ತದೆ ಮತ್ತು ಕೊರತೆಯಲ್ಲಿರುವವರಿಗೆ ಸೇವೆ ಮಾಡಲು ಉತ್ತೇಜಿಸುತ್ತದೆ.